ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಚಿಕ್ಕೋಡಿ.
ಸಾಃ ಚಿಕ್ಕೋಡಿ.

| | |
|---|---|
| ಎಪ ಡಿ ಪಿ | **11/18** |
| ಶಿವಾನಂದ | ಸಿ .ಡಬ್ಲ್ಯೂ- **1** |
| ದಿನಾಂಕ | 12-09-2022 |

| | |
|---|---|
| ಹೆಸರು | ಶಿವಾನಂದ |
| ತಂದೆ/ತಾಯಿ/ಗಂಡನ ಹೆಸರು | ಅಶೋಕ |
| ವಯಸ್ಸು | 35 ವರ್ಷ |
| ಉದ್ಯೋಗ | ಬೂ ಮಾಪಕರು |
| ವಾಸ | ಚಿಕ್ಕೋಡಿ |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ :ಎದುರುದಾರ ಪರ ಶ್ರೀ ಬಿ ಎನ್ ಪಿ ನ್ಯಾಯವಾದಿಗಳಿಂದ.

ನನಗೆ ನ್ಯಾಯಾಲಯದದಿಂದ ಕಮೀಷನರ ವಾರಂಟ ಬಂದಿತ್ತು. ಅದರ ಜೊತೆಗೆ ಪ್ರಾಥಮಿಕ ಡಿಕ್ರಿ, ಅರ್ಜಿಯ ನಕಲು ಮತ್ತು ದಾವಾ ಸ್ವತ್ತುಗಳ ದಾಖಲೆಗಳು ಸಹ ಬಂದಿದ್ದವು. ಪ್ರಾಥಮಿಕ ಡಿಕ್ರಿ, ಮತ್ತು ದಾಖಲೆಗಳನ್ನು ಅನುಸರಿಸಿ ಎರಡು ಕಕ್ಷಿದಾರರಿಗೆ ನೋಟೀಸನ್ನು ನೀಡಿ ಅಳತೆ ಕೆಲಸಕ್ಕೆ ಸಮಯ ನಿಗದಿಪಡಿಸಿರುತ್ತೇನೆ. ಉಬಯ ಕಕ್ಷಿದಾರರಿಗೆ ನೋಟೀಸುಗಳು ಜಾರಿಯಾಗಿದ್ದು ನಂತರ ನಾನು ದಾವಾ ಸ್ವತ್ತಿಗೆ ಬೇಟಿ ನೀಡಿ ಅಳತೆ ಕೆಲಸವನ್ನು ಕೈಗೊಂಡು ನಿಯೋಗಿ ಕೆಲಸವನ್ನು ಮುಕ್ತಾಯಗೊಳಿಸುತ್ತೇನೆ. ದಾಖಲೆಗಳು ಮತ್ತು ಪ್ರಾಥಮಿಕ ಡಿಕ್ರಿ, ಅನುಸಾರ ವಿಭಾಗವನ್ನು ಮಾಡಿ ನಕ್ಷೆಯನ್ನು ತಯಾರಿಸಿರುತ್ತೇನೆ. ಸದರಿ ನಕ್ಷೆ ಮತ್ತು ನನ್ನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈಗ ನೋಡುತ್ತಿರುವ ದಾಖಲೆ ನಾನು ನೀಡಿದ ವರದಿಯಾಗಿದ್ದು ಅದನ್ನು ನಿ ಸಿ 1 ಎಂದು ಗುರುತಿಸಲಾಯಿತು. ನಕ್ಷೆಯನ್ನು ನಿ ಸಿ 2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರ ಪರ ಶ್ರೀ ಎಲ್ ವಿ ಬಿ ನ್ಯಾಯವಾದಿಗಳಿಂದಃ

ನಾನು ದ್ವಿತೀಯ ಪಿ ಯು ಸಿ ಮತ್ತು ಬಿ ಎ ಡಿ ಎಡ್ ಪದವಿದರ ಇರುತ್ತೇನೆ. ನಾನು ಸರ್ವೇಯರ ಹುದ್ದೆಗೆ ದ್ವಿತಿಯಿ ಪಿ ಯು ಸಿ ಶಿಕ್ಷಣದ ಮೇಲೆ ನೇಮಕಾತಿ ಹೊಂದಿರುತ್ತೇನೆ ಎಂದು ಸೂಚಿಸುವುದು ಸರಿ. 2013 ನವೆಂಬರದಿಂದ ಇಲ್ಲಿಯವರಿಗೂ ಸರ್ವೇಯರ ಎಂದು ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣಕ್ಕೂ ಮೊದಲು ನಾನು ನ್ಯಾಯಾಲಯದಿಂದ ಬಂದ ಪ್ರಕರಣಗಳಲ್ಲಿ ಸರ್ವೆ ಕೆಲಸವನ್ನು ಮಾಡಿರುತ್ತೇನೆ. ಯಾವ ಯಾವ ಪ್ರಕರಣಗಳಲ್ಲಿ ಅಳತೆ ಕಾರ್ಯ ಮಾಡಿರುತ್ತೇನೆ ಎಂದು ನನಗೆ ನೆನಪು ಇಲ್ಲ. ಸರ್ವೆ ನಂಬರ 429/ಅ/1/ಪಿ2 ಇದರ ಒಟ್ಟು ಕ್ಷೇತ್ರ 1 ಎಕರೆ 21 ಗುಂಟೆ

ಪಿ ಕೆ 1 ಗುಂಟೆ ಇದರ ಪೈಕಿ ದಾವಾ ಸ್ವತ್ತು 30 ಗುಂಟೆ ಇರುತ್ತದೆ ಎಂದು ಸೂಚಿಸುವುದು ಸರಿ. ಸರ್ವೆ ನಂಬರ 429/4, 3 ಎಕೆರ 25 ಗುಂಟೆ ಅದರ ಪೈಕಿ ದಾವಾ ಸ್ವತ್ತು 1 ಎಕರೆ 32.50 ಗುಂಟೆ ಇರುತ್ತದೆ ಎಂದು ಸೂಚಿಸುವುದು ಸರಿ. ದಾವಾ ಸ್ವತ್ತುಗಳನು ಅಳತೆ ಮಾಡಲು ದಿಃ18-11-2021 ರಂದು ನಿಗದಿ ಪಡಿಸಿದ್ದೇನು. ನಿ ಪಿ 2 ರಲ್ಲಿ ಅಳತೆ ದಿನಾಂಕ ದಿಃ18-12-2022 ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿ ಅದು ಕಣ್ಣು ತಪ್ಪಿನಿಂದ ತಪ್ಪಾಗಿ ನಮೂದಿಸಲಾಗಿದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ರಿ ಸ ನಂಬರ 429/ಅ/1/ಪಿ2 ಕ್ಷೇತ್ರ 30 ಗುಂಟೆ ಇದು ಹಿರೆಕೂಡಿ ಚಿಕ್ಕೋಡಿಗೆ ರಸ್ತೆಗೆ ಹೊಂದಿಕೊಂಡು ಪೂರ್ವ ಬಾಗದಲ್ಲಿ ಇರುತ್ತದೆ ಎಂದು ಸೂಚಿಸುವುದು ಸರಿ. ಸದರಿ ಜಮೀನಿನಲಿ ಮನೆ ಮತ್ತು ಬಾವಿಗಳು ಇರುತ್ತವೆ ಎಂದು ಸೂಚಿಸುವುದು ಸರಿ. ಸದರಿ ಜಮೀನಿನಲ್ಲಿ ಹುಣಸಿ ಮರಗಳು ಮತ್ತು ತಂಗಿನ ಮರಗಳು ಇರುತ್ತವೆ ಎಂದು ಸೂಚಿಸುವುದು ಸರಿ. ಸದರಿ ಜಮೀನು ಒಂದೇ ಜಮೀನು ಇರುತ್ತದೆ ಎಂದರೆ ಸಾಕ್ಷಿ ಸರ್ವೆ ನಂಬರ 429/ಅ/1/ಪಿ2, 30 ಗುಂಟೆ ಜಮೀನಿನ ಪೈಕಿ 20 ಗುಂಟೆ ಜಮೀನು ಬೇರೆ ಇದೆ, 12 ಗುಂಟೆ ಬೇರೆ ಇದೆ ಅವುಗಳನ್ನು ಎ, ಬಿ, ಸಿ, ಡಿ ಮತ್ತು ಇಪ, ಜಿ, ಎಚ್ ಎಂದು ಬೇರೆ ಬೇರೆ ಅಕ್ಷರಗಳಿಂದ ನಿಶಾನೆ ಸಿ 2 ರಲ್ಲಿ ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಜಮೀನುಗಳು ಬೇರೆ ಬೇರೆ ಇರುವುದಿಲ್ಲ ಒಟ್ಟಾಗಿ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಕಮಿಷನರ ವರದಿಯನ್ನು ತಯಾರಿಸುವ ಪೂರ್ವದಲ್ಲಿ ಜಮೀನುಗಳಿಗೆ ವಯಕ್ತಿಕವಾಗಿ ಬೇಟಿ ನೀಡಿ ವರದಿ ತಯಾರಿಸಬೇಕಾಗುತ್ತದೆ ಎಂದು ಸೂಚಿಸುವುದು ಸರಿ. ಸದರಿ ಅಳತೆ ಕಾರ್ಯಕ್ಕೆ ಹೋಗಬೇಕಾದರೆ ಅಳತೆ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ ಎಂದು ಸೂಚಿಸುವುದು ಸರಿ. ನಾನು ಸರಪಳಿಯನ್ನು ತೆಗೆದುಕೊಂಡು ಹೋಗಿದ್ದು ಅದರಲ್ಲಿ ಪಾಳನಿ ಪದ್ಧತಿಯನ್ನು ಅನುಸರಿಸಿ ಅಳತೆ ಕಾರ್ಯ ಮಾಡಿರುತ್ತೇನೆ. ಅಳತೆಯನ್ನು ಮಾಡಲು ನಾನು ನನ್ನ ಜೊತೆ ಬಾಂದ ಜವಾನನ್ನು ಕರೆದುಕೊಂಡು ಹೋಗಿದೇನು. ಅಳತೆ ಮಾಡುವಾಗ ಜಮೀನಿನಲ್ಲಿ ಸೀಮೆ ಕಲ್ಲುಗಳು ಇರುವ ಕುರಿತು ಪರಿಶೀಲನೆ ಮಾಡಬೇಕಾಗುತ್ತದೆ ಎಂದು ಸೂಚಿಸುವುದು ಸರಿ. ಸೀಮೆ ಕಲ್ಲು ಇಲ್ಲದೇ ಇರುವ ಪಕ್ಷದಲ್ಲಿ ಅವರ ಸ್ವಾ ದಿನ ಅನುಬದ ಪ್ರಕಾರ ಅಳತೆ ಕಾರ್ಯ ಮಾಡಬೇಕಾಗುತ್ತದೆ. ಸದರಿ ಜಮೀನಿನಲ್ಲಿ ಸೀಮೆ ಕಲ್ಲು ಇದ್ದ ಪಕ್ಷದಲ್ಲಿ ಸದರಿ ಸೀಮೆ ಕಲ್ಲಿನಿಂದ ಅಳತೆ ಕಾರ್ಯವನ್ನು ಪ್ರಾರಂಬಿಸಬೇಕಾಗುತ್ತದೆ ಎಂದು ಸೂಚಿಸುವುದು ಸರಿ. ಪ್ರಸ್ತುತ ಪ್ರಕರಣದಲ್ಲಿ ಜಮೀನುಗಳ ಅಳತೆಗೆ ಸಂಬಂದ ಪಟ್ಟಂತೆ ಸೀಮೆ ಕಲ್ಲುಗಳು ಸಿಕ್ಕಿಇರುವುದಿಲ್ಲ ಆದ್ದರಿಂದ ವಹಿವಾಟಿಯ ಪ್ರಕಾರ ಅಳತೆ ಕಾರ್ಯವನ್ನು ಕೈಗೊಂಡಿರುತ್ತೇನೆ. ಪ್ರಸ್ತುತ ಪ್ರಕರಣದಲ್ಲಿಯ ಜಮೀನುಗಳನ್ನು ಹೊರತು ಪಡಿಸಿ ಅದರ ಅಕ್ಕ ಪಕ್ಕದಲ್ಲಿನ ಜಮೀನಿನ ಸೀಮೆ ಕಲ್ಲುಗಳನ್ನು ನಾನು ಪರಿಶೀಲನೆ ಮಾಡಿಲ್ಲ. ಸೀಮೆ ಕಲ್ಲುಗಳು ಜಮೀನಿನಲ್ಲಿ ಇಲ್ಲವಾದರೆ ಸದರಿ ಜಮೀನ ಪಕ್ಕದ ಜಮೀನಿನಲ್ಲಿ ಇರುವ ಸೀಮೆ ಕಲ್ಲಿನಿಂದ ಅಳತೆ ಕಾರ್ಯಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದು ಸೂಚಿಸುವುದು ಸರಿ. ಪ್ರಸ್ತುತ ಪ್ರಕರಣದಲ್ಲಿ ಜವೀನಿನ ಗುರುತು ಜಿ ಪಿ ಆರ್ ಎಸ್ ಮತ್ತು ವಹಿವಾಟಿಯ ಮೂಲಕ ಕಂಡು ಬಂದಿದ್ದರಿಂದ

ಪಕ್ಕದ ಜಮೀನಿನ ಸೀಮೆ ಕಲ್ಲನ್ನು ಪರಿಶೀಲನೆ ಮಾಡಿಲ್ಲ. ಸದರಿ ಜಿ ಪಿ ಆರ್ ಎಸ್ ಯಂತ್ರವನ್ನು ವಹಿವಾಟಿಯ ಜಮೀನಿನ ಮೇಲೆ ಇಟ್ಟು ಪರಿಶೀಲನೆ ಮಾಡಬೇಕಾಗುತ್ತದೆ ಎಂದು ಸೂಚಿಸುವುದು ಸರಿ. ಸದರಿ ವಿಷಯವನ್ನು ನಿ ಸಿ 2 ರಲ್ಲಿ ನಮೂದಿಸಿಲ್ಲ ಎಂದು ಸೂಚಿಸುವುದು ಸರಿ.

ಸರ್ವೆ ನಂಬರ 429/4 ಇದರ ಒಟ್ಟು ಕ್ಷೇತ್ರ 3 ಎಕರೆ 25 ಗುಂಟೆ ದಲ್ಲಿ ದಾವಾ ಸ್ವತ್ತು ಕ್ಷೇತ್ರ 1 ಎಕರೆ 32.50 ಇದರಲ್ಲಿ ಅರ್ಜಿದಾರರು ಮತ್ತು ಎದುರುದಾರ ಸೇರಿಕೊಂಡು ಮೂರು ಪಟ್ಟಿಗಳು ಇರುತ್ತವೆ ಎಂದು ಸೂಚಿಸುವುದು ಸರಿ. ನಿ ಸಿ 2 ಪಿ ಟಿ ಶೀಟ ನಲ್ಲಿ ಮೂರು ಪಟ್ಟಿ ಇರುವ ಕುರಿತು ನಮೂದಿಸಿಲ್ಲ ಎಂದು ಸೂಚಿಸುವುದು ಸರಿ. ಸ್ವಾದಿನ ಅನುಬದ ಪ್ರಕಾರ ಮೂರು ಪಟ್ಟಿಗಳು ಸೇರಿ 1 ಎಕರೆ 32.50 ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಸ್ವಾದಿನ ಅನುಬವದ ಪ್ರಕಾರ 1 ಎಕರೆ 2 ಗುಂಟೆ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಮೂರು ಪಟ್ಟಿಗಳು ಒಟ್ಟಾಗಿ 1 ಎಕರೆ 2 ಗುಂಟೆ ಜಮೀನು ಇರುವ ಕುರಿತು ನಿ ಸಿ 2 ರಲ್ಲಿ ಜಿ, ಎಚ್, ಐ, ಜೆ, ಕೆ, ಎಲ್, ಎಮ್ ಎನ್ನುವ ಅಕ್ಷರಗಳಿಂದ ತೋರಿಸಿರುತ್ತೇನೆ. ನಿ ಸಿ 2 ರಲ್ಲಿ ಸದರಿ ಪಟ್ಟಿಗಳ ಉದ್ದಳತೆಗಳನ್ನು ನಮೂದಿಸಿರುತ್ತೇನೆ. ಸದರಿ ಅಳತೆಗಳನ್ನು ಸರಪಳಿ ಅಳತೆ ಆದಾರದ ಮೇಲೆ ನಮೂದಿಸಿರುತ್ತೇನೆ. ಸದರಿ ಸರಪಳಿ 50 ಲಿಂಕಿನ ಸರಪಳಿ ಇದ್ದು ಒಂದು ಲಿಂಕ 20 ಸೇಂಟಿಮೀಟರ ಇರುತ್ತದೆ ಹಾಗೆ 50 ಲಿಂಕಿನ ಒಂದು ಸರಪಳಿ 10 ಮೀಟರ ಇರುತ್ತದೆ. ಸದರಿ ಅಳತೆ ಕಾರ್ಯವನ್ನು ನಾನು ನ್ಯಾಯಾಲಯದಿಂದ ಕಳುಹಿಸಿದ ದಾಖಲೆಗಳ ಪ್ರಕಾರ ಮಾಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಸದರಿ ಸ್ವತ್ತುಗಳಿಗೆ ಪೂಡಿ ಕೆಲಸ ಬಾಕಿ ಇರುತ್ತದೆ ಎಕೆಂದರೆ ಜಮೀನಿನ ಸಂಬಂದ ಪಟ್ಟ ಮಾಲಿಕರು ನಮ್ಮ ಇಲಾಖೆಗೆ ಅಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಅದನ್ನು ಕ್ರಮ ಸಂಖ್ಯೆ 7 ರಲ್ಲಿ ನಮೂದಿರುತ್ತೇನೆ. ಸದರಿ ಪ್ರಕರಣದಲ್ಲಿ ಆಕಾರ ಬಂದ ಮತ್ತು ಪಹಣಿ ಪತ್ರಿಕೆಗಳಿಗೆ ವ್ಯತ್ಯಾಸ ಇರುವುದರಿಂದ ಪೂಡಿ ಬಾಕಿ ಇರುವುದು ಕಂಡು ಬಂದಿರುತ್ತದೆ.

ಸರ್ವೆ ನಂಬರ 429/ಅ/1/ಪಿ2 ಇದರಲ್ಲಿ ಇರುವ ಬಾವಿ ಮತ್ತು ಮನೆಗಳನ್ನು ನಾನು ಗಮನಿಸಿರುತ್ತೇನೆ. ನಿ ಸಿ 2 ರಲ್ಲಿ ಎ ಬಿ ಸಿ ಡಿ ಅಕ್ಷರದಿಂದ ತೋರಿಸಿದ ಕ್ಷೇತ್ರದ ದಕ್ಷಿಣದಲ್ಲಿ ಬಾವಿ ಇರುತ್ತದೆ. ನಿ ಸಿ 2 ರಲ್ಲಿ ಸದರಿ ಬಾವಿಯನ್ನು ನಮೂದಿಸಿರುವುದಿಲ್ಲ. ಸದರಿ ಬಾವಿ ಸರ್ವೆ ನಂಬರ 429/ಅ/1/ಪಿ2 ಇದರಲ್ಲಿ 20 ಗುಂಟೆ ಜಮೀನಿನಲ್ಲಿ ಇರುತ್ತದೆ. ಮೂರು ಮನೆಗಳು 20 ಗುಂಟೆ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ರಸ್ತೆಗೆ ಹೊಂದಿಕೊಂಡು ಇರುತ್ತದೆ. ಸದರಿ ಜಮೀನಿನಲ್ಲಿ 4 ಮನೆಗಳು ಇರುತ್ತವೆ ಎಂದರೆ ಸಾಕ್ಷಿ ಇರಬಹುದು ಮತ್ತೊಂದು ಮನೆಯನ್ನು ನಾನು ಗಮನಿಸಿಲ್ಲ ಎಂದು ನುಡಿಯುತ್ತಾರೆ. ಅಳತೆ ಸಮಯದಲ್ಲಿ ಎದುರುದಾರರು ಹಾಜರು ಇದ್ದರು ಎಂದು ಸೂಚಿಸುವುದು ಸರಿಯಲ್ಲ. ನನ್ನ ವರದಿ ಜೊತೆಗೆ ಸಲ್ಲಿಸಿದ ವಾದಿಯರ ಹೇಳಿಕೆ ಮೇಲೆ ನನ್ನ ಸಹಿ ಮತ್ತು ವಾದಿಯರ ಸಹಿ ಇರುತ್ತದೆ. ನನ್ನ ಸಹಿ ಕೆಳಗಡೆ ನನ್ನ ಹೆಸರು ಮತ್ತು ಹುದ್ದೆ ಇರುವ ನಮೂದಿಸಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಸರ್ವೆ ನಂಬರ 429/4 ಇವುಗಳಲ್ಲಿ ಇರುವ ಪಟ್ಟಿಗಳ ಚಕಬಂದಿಯನ್ನು ಹೇಳಲು ಆಗುವುದಿಲ್ಲ. ಪ್ರತ್ಯಕ ಕ್ಷೇತ್ರಗಳನ್ನು ಹೇಳಲು ಸಾಧ್ಯ ಇಲ್ಲ

ಎಕೆಂದರೆ ತಮ್ಮ ಅನುಕೂಲಕ್ಕಾಗಿ ಅವರು ಪಟ್ಟಿಗಳನ್ನು ಮಾಡಿಕೊಂಡಿರುತ್ತಾರೆ ಅವುಗಳ ಒಟ್ಟು ಅಳತೆಯನ್ನು ನಾನು ಮಾಡಿರುತ್ತೇನೆ. ನಾನು ಸ್ಥಳಕ್ಕೆ ಹೋಗಿಲ್ಲ ಯಾವುದೇ ಅಳತೆ ಕಾರ್ಯವನ್ನು ಮಾಡಿಲ್ಲ, ಕಚೇರಿಯಲ್ಲಿಯೇ ಕುಳಿತು ದಾಖಲೆಗಳನ್ನು ತಯಾರಿಸಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

(ಸಾಕ್ಷಿಯ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧಿಶರು,
ಚಿಕ್ಕೋಡಿ.